# ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಹಿರಿಯೂರು

**ಸಿ.ಸಿ ಸಂಖ್ಯೆ:**2826/2020

| | | | |
|---|---|---|---|
| ಸಾಕ್ಷಿದಾರರ ಹೆಸರು | – | ವೀರೇಶ್ | ಸಿಡಬ್ಲ್ಯೂ-4 |
| ತಂದೆಯ/ಗಂಡನ ಹೆಸರು | – | ಕೆಂಜೇರಪ್ಪ | ಪಿಡಬ್ಲ್ಯೂ-2 |
| ವಯಸ್ಸು | – | ಸು.41 ವರ್ಷ | ಪ್ರ.ವ.ಬೋ ದಿನಾಂಕ:13.06.2024 |
| ಉದ್ಯೋಗ | – | ಶಿಕ್ಷಕರು | |
| ವಾಸ | – | ಕೆರೆಕೋಡಿಹಟ್ಟಿ ಗ್ರಾಮ. | |

**ಮುಖ್ಯ ವಿಚಾರಣೆ: ಮಾನ್ಯ ಎಪಿಪಿಯವರಿಂದ:-**

ಸಾಕ್ಷಿಯು ಆರೋಪಿ ತೋರಿಸಿದ ಕೃತ್ಯ ನಡೆದ ಸ್ಥಳದ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ-6** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ-6(ಎ)** ಎಂದು ಗುರುತಿಸಲಾಯಿತು. ದಿ:04.09.2020 ರಂದು ಪಿ ಡಿ ಕೋಟೆ ಗ್ರಾಮದ ಚಾಸಾ-1 ರವರ ಮನೆಯ ಹತ್ತಿರ ನಿಪಿ-6 ಕ್ಕೆ ಸಹಿ ಮಾಡಿದ್ದೇನೆ. ಆರೋಪಿ ತೋರಿಸಿದ ಸ್ಥಳದಲ್ಲಿ, ನನ್ನ ಸಮಕ್ಷಮ ಪಂಚನಾಮೆ ಮಾಡಿರುತ್ತಾರೆ. ನಿಪಿ-6 ರಲ್ಲಿರುವ ವಿಚಾರಗಳು ನನಗೆ ಗೊತ್ತು. ನನ್ನ ಜೊತೆಯಲ್ಲಿ ಚಾಸಾ-5 ಹಾಗೂ ಆರೋಪಿ ಸಹಿ ಮಾಡಿರುತ್ತಾರೆ. ನಿಪಿ-6 ನ್ನು ಬೆ.7.15 ರಿಂದ 8.00 ಗಂಟೆಯವರೆಗೆ ತಯಾರಿಸಿರುತ್ತಾರೆ,

**ಪಾಟೀ-ಸವಾಲು: ಆರೋಪಿ ಪರ ಶ್ರೀಮತಿ.ಹೆಚ್ ಬಿ ಆರ್ ವಕೀಲರಿಂದ:**

ನಾನು ಹರಿಯಬ್ಬೆ ಗ್ರಾಮಕ್ಕೆ ಹೋಗುವ ಮೊದಲು ಹಿರಿಯೂರು ಗ್ರಾಮಾಂತ ಪೊಲೀಸ್ ಠಾಣೆಯಲ್ಲಿದ್ದೆ. ನಾನು ಠಾಣೆಯನ್ನು ಬಿಡುವಾಗ ಸಹಿ ಮಾಡಿರುವುದಿಲ್ಲ. ನಾನು ಹರಿಯಬ್ಬೆ ಗ್ರಾಮಕ್ಕೆ ಬಂದಾಗ ಘಟನಾ ಸ್ಥಳದಲ್ಲಿ ಚಾಸಾ-1 ಮತ್ತು ಅವರ ಗಂಡ ಇದ್ದರು. ಚಾಸಾ-1 ರವರು ತೋರಿಸಿದ ನಂತರ ನನಗೆ ಅದು ಅವರ ಮನೆ ಎಂದು ತಿಳಿಯಿತು ಎಂದರೆ ಸಾಕ್ಷಿಯು ಆರೋಪಿಯು ಅವರ

ಮನೆಯನ್ನು ತೋರಿಸಿರುತ್ತಾರೆ ಎಂದು ಸ್ವ ಇಚ್ಚೆಯಿಂದ ನುಡಿಯುತ್ತಾರೆ. ನಿಪಿ–6 ರಲ್ಲಿರುವ ವಿಚಾರಗಳು ನನಗೆ ಗೊತ್ತಿಲ್ಲ, ನಾನು ಸ್ಥಳದಲ್ಲಿ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ–6 ಕ್ಕೆ ಬೇರೆ ಯಾರು ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳದ ಬಗ್ಗೆ ಪೋಲಿಸರು ನನಗೆ ಮೊದಲೇ ಮಾಹಿತಿ ನೀಡಿದ್ದರು ಎಂದರೆ ಸರಿಯಲ್ಲ. ಘಟನಾ ಸ್ಥಳದ ಚೆಕ್ಕುಬಂಧಿ ಮನೆಯ ಮೂರು ಕಡೆ ಅಕ್ಕ ಪಕ್ಕ ಮನೆಯಿಂದ ಸುತ್ತುವರೆದಿದ್ದು ಪೂರ್ವಭಿಮುಖವಾಗಿದೆ. ಆರೋಪಿ ಯಾವುದೇ ಜಾಗವನ್ನು ತೋರಿಸಿಲ್ಲ ಮತ್ತು ನಾನು ಸದರಿ ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ಸ್ಥಳಕ್ಕೆ ಪೋಲಿಸರು ಮತ್ತು ನಾವು ಹೋಗಿಲ್ಲ ಎಂದರೆ ಸರಿಯಲ್ಲ. ನಿಪಿ–6 ರಂತೆ ಯಾವುದೇ ಪಂಚನಾಮೆ ಜರುಗಿಸಿಲ್ಲ ಎಂದರೆ ಸರಿಯಲ್ಲ. ಇಂದು ನಾನು ಎರಡು ಪ್ರಕರಣಗಳಲ್ಲಿ ಸಾಕ್ಷಿ ನುಡಿದ್ದೇನೆ. ಈ ನ್ಯಾಯಾಲಯವನ್ನು ಹೊರತು ಪಡಿಸಿ ಶಿರಾ, ತಿಪಟೂರು ಮತ್ತು ಚಿತ್ರದುರ್ಗ ನ್ಯಾಯಾಲಯಗಳಲ್ಲಿ ಸಾಕ್ಷ್ಯ ನುಡಿದಿದ್ದೇನೆ. ನನ್ನೊಂದಿಗೆ ಚಾಸಾ–5 ರವರು ಸಹ ಸಾಕ್ಷ್ಯ ನುಡಿದಿರುತ್ತಾರೆ . ಪೋಲಿಸರು ನೀಡಿದ ನೋಟೀಸ್ ನ್ನು ಸ್ವೀಕರಿಸಿ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸರಿ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ., ಹಿರಿಯೂರು.